<u>ಅಸಲು ದಾವಾಃ-</u> 242/2021 ಡಿ.ಡಬ್ಲ್ಯೂಃ- 1

ದಿನಾಂಕಃ 30.10.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ- ವಾದಿ ಪರ ಶ್ರೀ.ಜಿ ಎಸ್ ಆರ್ ವಕೀಲರಿಂದ</u>

ಕನ್ನಡ ಓದಲು ಬರುತ್ತದಾ ಎಂದರೆ ಇಲ್ಲ. ನನ್ನ ತಂದೆ-ತಾಯಿಯ ಹೆಸರು ಎಂದರೆ ಕರಿಯಪ್ಪ ಮತ್ತು ಕರಿಯಮ್ಮ ಎಂದು ನುಡಿಯುತ್ತಾರೆ. ನನ್ನ ತಂದೆ ಯಾವಾಗ ತೀರಿಕೊಂಡಿರುತ್ತಾರೆ ಎಂದರೆ ನೆನಪಿಲ್ಲ. ನನ್ನ ತಂದೆಗೆ ಎಷ್ಟು ಜನ ಮಕ್ಕಳು ಎಂದರೆ ಮೂರು ಜನ ಅವರೆಂದರೆ ಸಾಕ್ಷಿಯು 1 ನೇ ವಾದಿಯ ಗಂಡ, ನಾನು ಮತ್ತು 2 ನೇ ಪ್ರತಿವಾದಿಯ ಗಂಡ ಹನುಮಂತಪ್ಪ ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿಕೊಂಡಾಗ ನನಗೆ ವಯಸ್ಸು ಎಷ್ಟಾಗಿತ್ತು ಎಂದರೆ ಸಾಕ್ಷಿಯು 10 ರಿಂದ 12 ವರ್ಷ ಎಂದು ನುಡಿಯುತ್ತಾರೆ. 1 ನೇ ವಾದಿಯ ಗಂಡ ಯಾವಾಗ ತೀರಿಕೊಂಡಿರುತ್ತಾರೆ ಎಂದರೆ ನೆನಪಿಲ್ಲ. ನನ್ನ ತಂದೆಗೆ ಪಿತ್ರಾರ್ಜಿ ಸ್ವತ್ತುಗಳು ಇದ್ದವು ಎಂದರೆ ಸರಿ. ಪಿತ್ರಾರ್ಜಿತ ಆಸ್ತಿಯ ಸರ್ವೆ ನಂಬರ್ ಎಷ್ಟು ಎಂದರೆ 45/1 ಮತ್ತು ಸರ್ವೆ ನಂಬರ್ 46/2 ಎಂದು ನುಡಿಯುತ್ತಾರೆ.

ದಾವಾ ಐಟಂ ನಂ.2 ನ್ನು ನಮ್ಮ ಕುಟುಂಬದವರು ಖರೀದಿ ಮಾಡುವ ಕಾಲಕ್ಕೆ ನಮ್ಮ ತಂದೆ ಜೀವಂತವಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ದಾವಾ ಐಟಂ ನಂ.2 ನ್ನು ಖರೀದಿ ಮಾಡುವ ಕಾಲಕ್ಕೆ ನನ್ನ ತಂದೆ ತೀರಿಕೊಂಡು ಎಷ್ಟು ವರ್ಷಗಳಾಗಿತ್ತು ಎಂದರೆ ನೆನಪಿಲ್ಲ. ನನ್ನ ತಂದೆ ತೀರಿಕೊಂಡಾಗ ನನಗೆ ಸುಮಾರು 3-4 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿಯು 10-12 ವರ್ಷ ಆಗಿತ್ತು ಎಂದು ನುಡಿಯುತ್ತಾರೆ. ನಮ್ಮ ತಂದೆ ತೀರಿಕೊಂಡ ನಂತರ ಕುಟುಂಬದ ಜವಬ್ದಾರಿಯನ್ನು ನನ್ನ ತಾಯಿ ಮತ್ತು ನನ್ನ ಅಣ್ಣ 1 ನೇ ವಾದಿಯ ಗಂಡ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ನಾನು ಮತ್ತು ನನ್ನ ತಾಯಿ ನೋಡಿಕೊಳುತ್ತಿದ್ದೆವು ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಯಲ್ಲಿ ನನ್ನ ತಾಯಿ ಮತ್ತು ನನ್ನ ಅಣ್ಣ ದುಡಿಮೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಯಾವುದೇ ದುಡಿಮೆ ಮಾಡುತ್ತಿರಲಿಲ್ಲ ನಾನು ಸ್ವಂತ ದುಡಿಮೆಯಿಂದ ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ದಾವಾ ಐಟಂ ನಂ.2 ನ್ನು ನಮ್ಮ ತಾಯಿಯ ಖರೀದಿ ಮಾಡುವ ಕಾಲಕ್ಕೆ ನನಗೆ ಎಷ್ಟು ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿಯು 15 ವರ್ಷ ಎಂದು ನುಡಿಯುತ್ತಾರೆ. ನಿಡಿ 1 ಕ್ರಯಪತ್ರದಲ್ಲಿ ನನ್ನ ವಯಸ್ಸು 12 ಎಂದು, ನನ್ನ ತಮ್ಮ 2 ನೇ ಪ್ರತಿವಾದಿಯ ಗಂಡ ಹನುಮಂತಪ್ಪನ ವಯಸ್ಸು 10 ವರ್ಷ ಎಂದು ನಮೂದು ಇರುತ್ತದೆ ಎಂದರೆ ಸರಿ. ನನ್ನ ತಂದೆ ತೀರಿಕೊಳ್ಳುವ ಕಾಲಕ್ಕೆ ನಾನು ಮತ್ತು 2 ನೇ ಪ್ರತಿವಾದಿಯ ಗಂಡ ಚಿಕ್ಕವರಿದ್ದಿದ್ದರಿಂದ ನನ್ನ ತಾಯಿ ಮತ್ತು 1 ನೇ ವಾದಿಯ ಗಂಡ ದುಡಿಮೆ ಮಾಡಿ ದಾವಾ ಐಟಂ ನಂ.2 ನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಣ್ಣ ಮತ್ತು ನನ್ನ ತಾಯಿಯು ತನ್ನ ಸ್ವಂತ ದುಡಿಮೆಯಿಂದ ದಾವಾ ಐಟಂ ನಂ.2 ರ ಅಸ್ತಿಯನ್ನು ಖರೀದಿ ಮಾಡಿದ್ದು ಆದರೆ ನಾನು ಮತ್ತು 2 ನೇ ಪ್ರತಿವಾದಿಯ ಗಂಡ ಸಣ್ಣ ವಯಸ್ಕರಾಗಿದ್ದರಿಂದ ಅವರು ನಮ್ಮ ಹೆಸರಿಗೆ ಕ್ರಯಪತ್ರ ಮಾಡಿಸಿ, ನನ್ನ ತಾಯಿಯೇ ಮೈನರ್ ಗಾರ್ಡಿಯನ್ ಆಗಿರುತ್ತಾರೆ ಎಂದರೆ ಸರಿಯಲ್ಲ. ನಿಡಿ 1 ಕ್ರಯಪತ್ರ ಆದ ಎಷ್ಟು ವರ್ಷಗಳ ನಂತರ ನನ್ನ ತಾಯಿ ತೀರಿಕೊಂಡಿರುತ್ತಾರೆ ಎಂದರೆ ನೆನಪಿಲ್ಲ. ನನ್ನ ತಾಯಿ ತೀರಿಕೊಂಡ ನಂತರ ನನ್ನ ಅಣ್ಣ 1 ನೇ ವಾದಿಯ ಗಂಡ ಕುಟುಂಬದ ಜವಬ್ದಾರಿ ನೋಡಿಕೊಳ್ಳುತ್ತಿದ್ದರು ಹಾಗೂ ದಾವಾ ಆಸ್ತಿಗಳ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಮತ್ತು 2 ನೇ ಪ್ರತಿವಾದಿಯ ಗಂಡ ಅಪ್ರಾಪ್ತ ವಯಸ್ಕರಾಗಿದ್ದರಿಂದ ನನ್ನನ್ನು ಮತ್ತು 2 ನೇ ಪ್ರತಿವಾದಿಯ ಗಂಡನನ್ನು ನನ್ನ ಅಣ್ಣ 1 ನೇ ವಾದಿಯ ಗಂಡ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ